ಹೋಟೆಲ್‌ಗಳಿಗೆ ಎಂದಿನಂತೆ ಹೋಗಿ ಅವರು ಒಂದು ರೂಪಾಯಿ ಕೊಟ್ಟರೆ ಹತ್ತು ರೂಪಾಯಿ ಕೊಡತೊಡಗಿದ. ಬೇಡ ಅಂದರೂ ಕೇಳದೆ ಹತ್ತರ ನೋಟು ಅಲ್ಲೇ ಇಟ್ಟು ಹೋಗಹತ್ತಿದ.

ಇದನ್ನು ನೋಡಿದ ಇತರರು ಅಂದರೆ, ಸಿಐಡಿ ಎಂದು ಗೊತ್ತಾದ ಬಳಿಕ ಒಂದೆರಡು ಬಾರಿ ಒಂದೊಂದು ರೂಪಾಯಿ ನೀಡಿದವರು, ಈವರೆಗೆ ಒಂದೇ ಒಂದು ರೂಪಾಯಿಯೂ ನೀಡದವರು ಕೂಡಾ ಒಂದು ರೂಪಾಯಿ ನೀಡಿ ಹತ್ತು ರೂಪಾಯಿ ಪಡೆಯತೊಡಗಿದರು. ಕೆಲವರು ಒಂದು ರೂಪಾಯಿಯ ಹಲವು ನಾಣ್ಯಗಳನ್ನು ತಗೊಂಡು ಬಂದಿದ್ದರೂ ಹಾಟ್‌ಮಿಟ್ಲೆ ಒಬ್ಬರಿಂದ ಒಂದೇ ನಾಣ್ಯ ಪಡೆಯುತ್ತಿದ್ದುದಲ್ಲದೆ, ಒಂದೇ ನೋಟು ನೀಡುತ್ತಿದ್ದ. ಅದಕ್ಕಾಗಿ ಕೆಲವರು ಕುಟುಂಬದ ಸದಸ್ಯರನ್ನೆಲ್ಲ ಕರೆದುಕೊಂಡು ಬಂದು ಒಂದೊಂದು ರೂಪಾಯಿ ಕೊಡಿಸಿ ಹತ್ತತ್ತು ರೂಪಾಯಿ ಪಡೆದು ಲಾಭ ಎಷ್ಟಾಯಿತು ಎಂದು ಲೆಕ್ಕ ಹಾಕುತ್ತಾ ಹೋದರು.

ನಾಲ್ಕು ಪುಟ್ಟ ಅಂಗಡಿಗಳು, ಎರಡು ಸಣ್ಣ ಹೋಟೆಲ್, ಒಂದು ಶಾಲೆ, ಒಂದು ಅಂಗನವಾಡಿ, ಒಂದು ಟೈಲರಿಂಗ್ ಶಾಪ್, ಗ್ರಾಮ ಪಂಚಾಯಿತಿ ಕಟ್ಟಡ, ಒಂದು ಗೋಲಿ ಸೋಡ ಅಂಗಡಿ, ಒಂದು ನ್ಯಾಯಬೆಲೆ ಅಂಗಡಿ, ಅದರಲ್ಲಿಯೇ ವ್ಯವಸಾಯಿಕ ಸಹಕಾರಿ ಬ್ಯಾಂಕ್, ಒಂದು ಪೋಸ್ಟಾಫೀಸ್ ಇಷ್ಟನ್ನೇ ಹೊಂದಿದ್ದ ಬಿಳಲೂರು ಎಂಬ ಪುಟ್ಟ ಊರು ಇದರಿಂದಾಗಿ ಇದ್ದಕ್ಕಿದ್ದಂತೆ ಜನಜುಂಗುಳಿಯ ಪ್ರದೇಶವಾಗಿ ಮಾರ್ಪಟ್ಟಿತು. ಜಾತ್ರೆಯ ವಾತಾವರಣ ನಿರ್ಮಾಣಗೊಂಡಿತು. ಕಳೆದ ಎರಡು ವಾರಗಳಲ್ಲಿ ಬಿಳಲೂರು ಕಡೆಗೆ ಎಲ್ಲೆಡೆಯ ಜನರು ಬಂದು ಹೋಗತೊಡಗಿದ್ದರಿಂದ ಜನನಿಬಿಡ ಪ್ರದೇಶವಾಗಿ ಪರಿವರ್ತನೆಗೊಂಡಿತ್ತು.

ತನ್ನಿಂದ ಯಾವುದೇ ಲಾಭ ಇಲ್ಲದಾಗ ಬಡವರು, ಹೊಟ್ಟೆಪಾಡಿಗಾಗಿ ಗೂಡಂಗಡಿ ಇಟ್ಟುಕೊಂಡವರು, ಸಣ್ಣ ಹೋಟೆಲ್‌ಗಳು, ಕೂಲಿಗೆ ಹೋಗುವವರು ಮಾತ್ರ ದುಡ್ಡು ನೀಡುತ್ತಿದ್ದರು. ಈಗ ಲಾಭವಾಗುತ್ತಿದೆ ಎಂದಾಗ ಎಲ್ಲರೂ ತಾಮುಂದು ನಾಮುಂದು ಎಂದು ಬರುತ್ತಿರುವುದು ಹಾಟ್‌ಮಿಟ್ಲೆಗೆ ಅರ್ಥವಾಯಿತೋ ಏನೋ? ಇದ್ದಕ್ಕಿದ್ದಂತೆ ಒಂದು ದಿನ ಹತ್ತು ರೂಪಾಯಿ ನೋಟು ಕೊಡುವುದನ್ನು ನಿಲ್ಲಿಸಿಬಿಟ್ಟ. ಕೊಟ್ಟ ಚಿಲ್ಲರೆಯನ್ನಷ್ಟೆ ತೆಗೆದುಕೊಂಡು 'ಶುಕ್ರವಾರ ಸಂಜೆ' ಅಂತಂದ. ಅಂದು ನಾಣ್ಯ ಹಿಡಿದುಕೊಂಡು ಬಂದವರ ಸಂಖ್ಯೆಯೂ ಬಹಳ ದೊಡ್ಡದಿತ್ತು. ಎಲ್ಲರೂ ನಿರಾಸೆಗೊಂಡರು. ಶುಕ್ರವಾರಕ್ಕೆ ಇನ್ನೂ ಐದು ದಿನಗಳಿವೆ. ಅಲ್ಲದೆ ಶುಕ್ರವಾರ ಹಾಟ್‌ಮಿಟ್ಲೆ ಬಿಳಲೂರಿನಲ್ಲಿ ಇರುವುದಿಲ್ಲ. ಬೆಳಗ್ಗೆಯೇ ಗುಂಡ್ಯ ಕಡೆಗೆ ಹೊರಡುವ ದಿನ. ಹಾಟ್‌ಮಿಟ್ಲೆ ಸುಳ್ಳು ಹೇಳುತ್ತಿದ್ದಾನೆ ಎಂದು ಮಾತನಾಡಿಕೊಂಡರು.

'ಒಂದು ರೂಪಾಯಿ ತೆಗೆದುಕೊಳ್ಳುವ ಮೊದಲೇ ಹೇಳಿದ್ದರೆ ಅದಾದರೂ ಉಳಿಯುತ್ತಿತ್ತು' ಎಂದು ಕೆಲವರು ತಲೆ ಕೆಡಿಸಿಕೊಂಡರು. 'ಹೋದರೆ ಹೋಗಲಿ ಒಂದು ರೂಪಾಯಿ ಅಲ್ವ' ಎಂದು ಅವರನ್ನು ಅವರೇ ಸಮಾಧಾನ ಪಡಿಸಿಕೊಂಡರು. ಯಾವುದಕ್ಕೂ ಶುಕ್ರವಾರ ಒಮ್ಮೆ ಬಂದು ನೋಡೋಣ ಎಂದು ತೀರ್ಮಾನಿಸಿ ಹೋದರು.

ಹಾಟ್‌ಮಿಟ್ಲೆಯ ಈ ನಡೆ ಹಲವರಿಗೆ ಅನುಮಾನಾಸ್ಪದವಾಗಿ ಕಾಣತೊಡಗಿತು. ಪೊಲೀಸರಿಗೆ ದೂರು ಕೊಟ್ಟು ಒಳಗೆ ಕೂರಿಸುವ ಬಗ್ಗೆಯೂ ಚರ್ಚೆ ನಡೆಸಿದರು.

ನೋಟು ಕೊಡುವ ಪ್ರಕ್ರಿಯೆ ಆರಂಭಗೊಳ್ಳುವವರೆಗೆ ಹಾಟ್‌ಮಿಟ್ಲೆ ಬಗ್ಗೆ ಸಣ್ಣ ಕುತೂಹಲವನ್ನೂ ತೋರಿಸದ ಜನರೇ ಇಂಥ ಅಮೋಘ ಬುದ್ಧಿವಂತಿಕೆಯನ್ನು ಸಾರ್ವಜನಿಕರ ಮುಂದೆ ಇಡತೊಡಗಿದರು. ಈ ವ್ಯಕ್ತಿಯನ್ನು ಹೀಗೆ ಬಿಟ್ಟರೆ ಮುಂದೆ ಊರಿಗೆ ಏನೆಲ್ಲ ತೊಂದರೆಗಳಾಗಬಹುದು ಎಂದು ಕಲ್ಪಿಸಿ ಕತೆ ಹೇಳತೊಡಗಿದರು. ಆದರೆ ಯಾರೂ